# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 435 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.08.2025 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗಾಯರಾಣ/ಅರಣ್ಯ ಜಮೀನುಗಳನ್ನು ಈ ಹಿಂದೆ ಅನಧಿಕೃತ ಸಾಗುವಳಿ ಮಾಡುವವರಿಗೆ ಸಕ್ರಮೀಕರಣಗೊಳಿಸಿರುವ ಪ್ರಕರಣಗಳು ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು); | ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಸಕ್ರಮೀಕರಣಗೊಳಿಸಿರುವ ಪ್ರಕರಣಗಳಲ್ಲಿ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿ ಪತ್ರಿಕೆಯಲ್ಲಿ ಹೆಸರು ಇಂಡೀಕರಣ ಮಾಡಿರುವ ಪ್ರಕರಣಗಳು ಎಷ್ಟು; ಕೇವಲ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿಯಲ್ಲಿ ಹೆಸರು ಇಲ್ಲದೇ ಇರುವ ಪ್ರಕರಣಗಳು ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ದಶಕಗಳೇ ಕಳೆದರೂ ಇಲ್ಲಿಯವರೆಗೂ ಕೆಲವು ಜನರಿಗೆ ಗಾಯರಾಣ/ಅರಣ್ಯ ಜಮೀನು ಇರುವ ಕಾರಣಕ್ಕೆ ಪಹಣಿ ಮಾಡಿಕೊಡದೇ ಇರುವುದರಿಂದ ಸಾರ್ವಜನಿಕರು ಕಛೇರಿಗೆ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ಒದಗಿಸುವುದು) | ಬಂದಿದೆ. |
| ಈ) | ಈ ಸಮಸ್ಯೆಗೆ ಸರ್ಕಾರ ಎಷ್ಟು ಸಮಯದೊಳಗಾಗಿ ಸ್ಪಷ್ಟವಾದ ಹಾಗೂ ಶಾಶ್ವತ ಪರಿಹಾರ ಕೈಗೊಳ್ಳುವುದು (ವಿವರಗಳನ್ನು ಒದಗಿಸುವುದು)? | ಅರಣ್ಯ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: FEE 185 FAF 2011, ದಿನಾಂಕ: 06.03.2025ರಲ್ಲಿ ಅರಣ್ಯ ಹಾಗೂ ಕಂದಾಯ ಇಲಾಖೆಯ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಮಟ್ಟದ ಹಾಗೂ ಪ್ರಾದೇಶಿಕ ಮಟ್ಟದ ಮತ್ತು ಜಿಲ್ಲಾ ಮಟ್ಟದ ಹಾಗೂ ಕ್ಷೇತ್ರಮಟ್ಟದ ಜಂಟಿ ಇಲಾಖಾ ಸಮಿತಿಗಳನ್ನು ರಚಿಸಲಾಗಿದೆ. ಕಂದಾಯ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್.ಎಸ್.ಎಂ. 2024 ದಿನಾಂಕ:25/11/2024 ರಲ್ಲಿ ಸರ್ಕಾರಿ ಜಮೀನಿನಲ್ಲಿ ಅರಣ್ಯ ಭೂಮಿ ಒಳಗೊಂಡಿದ್ದಲ್ಲಿ ಮತ್ತು ಅರಣ್ಯ ಭೂಮಿಯಲ್ಲಿ ಬಹು ಮಾಲೀಕತ್ವದ ಪಹಣಿಯಾಗಿದ್ದಲ್ಲಿ, ಮೊದಲಿಗೆ ಅರಣ್ಯ ಮತ್ತು ಗೋಮಾಳದ ಗಡಿ ಗುರುತಿಸಿಕೊಂಡು, |

| | | |
|---|---|---|
| | | ಅರಣ್ಯಾಧಿಕಾರಿಗಳಿಂದ ನಕ್ಷೆ ದೃಢೀಕರಿಸಿಕೊಂಡು, ಭಾರತೀಯ/ಕರ್ನಾಟಕ ಅರಣ್ಯ ಕಾಯ್ದೆಗೆ ಧಕ್ಕೆ ಬಾರದಂತೆ, ಉಳಿಕೆ ಸರ್ಕಾರಿ ಜಾಗದಲ್ಲಿ ಅನುಭವದಲ್ಲಿರುವ ಅರ್ಹ ಮಂಜೂರಿದಾರರಿಗೆ ಮಾತ್ರ ಪೋಡಿ ದುರಸ್ತಿ ಕಾರ್ಯ ನಿರ್ವಹಿಸಲು ತಹಶೀಲ್ದಾರರು ಕ್ರಮವಹಿಸುವುದು ಎಂದು ತಿಳಿಸಲಾಗಿದೆ. |

ಸಂಖ್ಯೆ: ಆರ್‌ಡಿ. 103 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| | | ಅನುಬಂಧ-1 | | | | | | |
|---|---|---|---|---|---|---|---|---|
| ಕ್ರಮ ಸಂಖ್ಯೆ. | ಜಿಲ್ಲೆಗಳು | ರಾಜ್ಯದಲ್ಲಿ ಗಾಯರಾಣ/ಗೋಮಾಳ/ಹುಲ್ಲುಬನಿ/ಅರಣ್ಯ ಜಮೀನುಗಳನ್ನು ಈ ಹಿಂದೆ ಅನಧಿಕೃತ ಸಾಗುವಳಿ ಮಾಡುವವರಿಗೆ ಸಕ್ರಮೀಕರಣಗೊಳಿಸಿರುವ ಪ್ರಕರಣಗಳ ಜಿಲ್ಲಾವಾರು ವಿವರ. | ವಿಸ್ತೀರ್ಣ (ಎಕರೆ/ಗುಂಟೆ) | ಸಕ್ರಮೀಕರಣಗೊಳಿಸಿರುವ ಪ್ರಕರಣಗಳಲ್ಲಿ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿ ಪತ್ರಿಕೆಯಲ್ಲಿ ಹೆಸರು ಇಂಡೀಕರಣ ಮಾಡಿರುವ ಪ್ರಕರಣಗಳ ವಿವರ | ವಿಸ್ತೀರ್ಣ (ಎಕರೆ/ಗುಂಟೆ | ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿಯಲ್ಲಿ ಹೆಸರು ಇಲ್ಲದೇ ಇರುವ ಪ್ರಕರಣಗಳ ವಿವರ. | ವಿಸ್ತೀರ್ಣ (ಎಕರೆ/ಗುಂಟೆ | ಷರಾ |
| 1 | ಬೆಂಗಳೂರು ನಗರ | 6923 | 3405-28 | 6923 | 3405-28 | 0 | 0 | ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ. |
| 2 | ಬೆಂಗಳೂರು ಗ್ರಾಮಾಂತರ | 21915 | 29945-29 | 0 | 0 | 0 | 0 | ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ. |
| 3 | ಚಿಕ್ಕಬಳ್ಳಾಪುರ | 28646 | 52852-11.00 | 0 | 0 | 0 | 0 | ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ. |
| 4 | ಚಿತ್ರದುರ್ಗ | 18880 | 53207-05 | 0 | 0 | 0 | 0 | ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ. |
| 6 | ಕೋಲಾರ | 28 | 75-24 | 28 | 75-24 | 0 | 0 | 28 ಖಾಯಂ ಸಾಗುವಳಿ ಚೀಟಿ ಗಳನ್ನು ವಿತರಿಸಲಾಗಿರುತ್ತದೆ |
| 5 | ದಾವಣಗೆರೆ | 9866 | 15227-30 | 0 | 0 | 0 | 0 | |
| 7 | ಬೆಂಗಳೂರು ದಕ್ಷಿಣ | 27417 | 28559-34 | 0 | 0 | 0 | 0 | |
| 8 | ಶಿವಮೊಗ್ಗ | 27713 | 51860 | 395 | 738 | 65 | 117 | |
| 9 | ತುಮಕೂರು | 116 | 202.13 | 116 | 202.13 | 0 | 0 | |
| 10 | ಚಾಮರಾಜನಗರ | 2739 | 4723.1 | 0 | - | 0 | - | ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವುದಿಲ್ಲ. |
| 11 | ಚಿಕ್ಕಮಗಳೂರು | 12631 | 22835-07 | 0 | 0 | 0 | 0 | 0 |
| 12 | ದಕ್ಷಿಣ ಕನ್ನಡ | 94 | 62.29 | 0 | | 0 | | ಮಂಗಳೂರು ಅರಣ್ಯ ವಿಭಾಗಕ್ಕೆ ಸಂಬಂಧಿಸಿದಂತೆ 1996 ರಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ ಅರಣ್ಯ ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ ಎಫ್.ಇ.ಇ.5 ಎಫ್.ಜಿ.ಎಲ್ 90 ದಿನಾಂಕ 09-05-1997 ರ ಪ್ರಕಾರ ಸಕ್ರಮಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ( ಅರಣ್ಯ ಇಲಾಖೆಯಿಂದ ನೀಡಲಾಗಿರುವ 40 ಪ್ರಕರಣಗಳು 1978 ರ ಮೊದಲು ಮಂಜೂರಾದ ಪ್ರಕರಣಗಳಾಗಿರುತವೆ ) |
| 13 | ಹಾಸನ | 60001 | 127057-33 | 0 | 0 | 0 | 0 | ಅರಣ್ಯ ಜಮೀನು ಮಂಜೂರಾತಿಯಾದ ಯಾವುದೇ ಪ್ರಕರಣಗಳಿರುವುದಿಲ್ಲ ಹಾಗೂ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳು ಇರುವುದಿಲ್ಲ |
| 14 | ಕೊಡಗು | 45 | 36.23 | 45 | 36.23 | 0 | 0 | |
| 15 | ಮಂಡ್ಯ | 30640 | 69409-19 | 125 | 187-28 | 147 | 220-08 | |

| | | | | | | | | |
|---|---|---|---|---|---|---|---|---|
| 16 | ಮೈಸೂರು | 18693 | 46317-17.08 | 18693 | 0 | 0 | 0 | ಮೈಸೂರು ಜಿಲ್ಲೆಯಲ್ಲಿ ಮಂಜೂರಾದ ಪ್ರಕರಣಗಳಲ್ಲಿ ಖಾಯಂ ಸಾಗುವಳಿ ಚೀಟಿ ನೀಡಿದ್ದು, ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳು ಯಾವುದು ಇರುವುದಿಲ್ಲ. |
| 17 | ಉಡುಪಿ | 626 | 624.89 | 0 | 0 | 0 | 0 | ಜಿಲ್ಲೆಯ 626 ಸಕ್ರಮೀಕರಣಗೊಳಿಸಿರುವ ಪ್ರಕರಣಗಳಲ್ಲಿ - 397 ಪ್ರಕರಣಗಳು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವ ಜಮೀನಾಗಿದ್ದು - 515.73 ಎಕರೆ ವಿಸ್ತೀರ್ಣವಾಗಿರುತ್ತದೆ. ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ (ಫಾರಂ ನಂ 50/53/57 ರಲ್ಲಿ ) ಸಕ್ರಮೀಕರಣಗೊಳಿಸಿರುವ ಗೋಮಾಳ ಜಮೀನಿನ ಪ್ರಕರಣಗಳು - 229 , ಒಟ್ಟು ವಿಸ್ತೀರ್ಣ -109.16 ಎಕರೆ |
| 19 | ಬಾಗಲಕೋಟೆ | 178 | 404-24 | 178 | 404-24 | 0 | 0 | 178 ಪ್ರಕರಣಗಳಲ್ಲಿ ಖಾಯಂ ಸಾಗುವಳಿ ಚೀಟಿ ನೀಡಲಾಗಿರುತ್ತದೆ |
| 18 | ಬೆಳಗಾವಿ | 876 | 2089-34 | 876 | 2089-34 | 0 | 0 | |
| 20 | ವಿಜಯಪುರ | 354 | 1474-03 | 230 | 1035-30 | 124 | 438-13 | |
| 21 | ಧಾರವಾಡ | 457 | 1080-08 | 457 | 1080-08 | 0 | 0 | ಸಾಗುವಳಿ ಚೀಟಿಗಳನ್ನು ನೀಡಿದ್ದು ಇರುತ್ತದೆ. |
| 22 | ಗದಗ | 10 | 40-09 | 0 | 0 | 0 | 0 | ಶಾಶ್ವತ ಸಾಗುವಳಿ ಚೀಟಿ ನೀಡಿದ್ದು ಇರುತ್ತದೆ |
| 23 | ಹಾವೇರಿ | 2019 | 4898-16 | 2019 | 4898-16 | 0 | | ಖಾಯಂ ಸಾಗುವಳಿ ಚೀಟಿ ನೀಡಲಾಗಿರುತ್ತದೆ |
| 24 | ಉತ್ತರ ಕನ್ನಡ | 0 | 0 | 0 | 0 | 0 | 0 | |
| 25 | ಕಲಬುರ್ಗಿ | 8824 | 28838.2 | 8750 | 28469.1 | 78 | 241-12 | |
| 26 | ಬೀದರ್ | 5725 | 15734.28 | 5725 | 15734.28 | 0 | 0 | |
| 27 | ಬಳ್ಳಾರಿ | 0 | 0 | 0 | 0 | 0 | 0 | ಬಳ್ಳಾರಿ ಜಿಲ್ಲೆಯಲ್ಲಿ ಗಾಯರಾಣ/ಗೋಮಾಳ/ಹುಲ್ಲುಬನಿ/ಅರಣ್ಯ ಜಮೀನುಗಳನ್ನು ಈ ಹಿಂದೆ ಅನಧಿಕೃತ ಸಾಗುವಳಿ ಮಾಡಿರುವವರಿಗೆ ಯಾವುದೇ ಪ್ರಕರಣಗಳಲ್ಲಿ ಸಕ್ರಮೀಕರಣ ಗೊಳಿಸಿರುವುದಿಲ್ಲ |
| 28 | ಕೊಪ್ಪಳ | 1712 | 2957-00 | 1710 | 2950-00 | 2 | 07-00 | ಯಲಬುರ್ಗಾ ತಾಲೂಕಿನಲ್ಲಿ ಮಂಜೂರಿಯಾದ ಪ್ರಕರಣಗಳ ಪೈಕಿ 2 ಪ್ರಕರಣಗಳಲ್ಲಿ ಮಾತ್ರ ಪಹಣಿ ಇಂಡೀಕರಣ ಆಗಿರುವುದಿಲ್ಲ. ಸದರಿ ಪ್ರಕರಣಗಳನ್ನು ಸಧ್ಯ ನಮೂನೆ 1 ರಿಂದ 5 ರ ತಂತ್ರಾಂಶದಲ್ಲಿ ಅಳವಡಿಸಿ ಪಹಣಿ ನೀಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| 29 | ರಾಯಚೂರು | 1836 | 5192-00 | 0 | 0 | 33 | 73-26 | ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವುದಿಲ್ಲ. |
| 30 | ಯಾದಗಿರಿ | 327 | 1296-13 | 327 | 1296-13 | 0 | 0 | |
| 31 | ವಿಜಯನಗರ | 0 | 0 | 0 | 0 | 0 | 0 | |
| **ಒಟ್ಟು** | | **289291** | **570412** | **46597** | **62604.33** | **449** | **1097-19** | |